


**ಎಡದಿಂದ ಬಲಕ್ಕೆ:**

1. ದಾಳ ಕತ್ತರಿಸಿದ ಯಜಮಾನನೇ ಸೇನಾ ಮುಖಂಡನಾದ (4)
3. ವಾರ ವಾರವೂ ಮತ್ತೆ ಮತ್ತೆ ಅದೇ ರೀತಿ ಬಿಡುವು (3)
4. ಗದೆಯನ್ನು ಮುಚ್ಚಿಟ್ಟಿದ್ದ ಸ್ಥಳ ಇದೇ ಮಳಿಗೆ (3)
6. ಅನ್ಯ ದೇಶದವರ ಬಗ್ಗೆ ಉಪೇಕ್ಷೆ ಏಕೆ? (4)
8. ಆಕೆಯ ಕೇಶರಾಶಿ ಮನಸೆಳೆಯುವಂತಿದೆ (4)
10. ಶಾಮಣ್ಣನ ತಮ್ಮನ ಆಯುಷ್ಯ ನೂರು ವರ್ಷ (4)
12. ಭಯ ಬರಿಸುವಂತೆ ದಬ್ಬು, ಹೆದರಿಸು (4)
16. ನಿರ್ಮಾಣದಲ್ಲೂ ಎಲ್ಲ ಕೊಳೆರಹಿತ, ಸ್ವಚ್ಛ (3)
17. ಹೊಳಪಿನಿಂದಿದ್ದರೂ ಬಣ್ಣ ಮಾತ್ರ ಅರಿಸಿನ (3)
18. ಕೊಳ್ಳುವವರೇ ಇಲ್ಲದಿದ್ದರೆ ಹೇಗೆಂಬ ಆತಂಕ (4)

**ಮೇಲಿಂದ ಕೆಳಕ್ಕೆ:**

1. ಮದ್ಯಪಾನ ವ್ಯಸನವನ್ನು ಅಡಗಿಸಿದ್ದು ಹೇಗೆ? (3)
2. ತಗಡಿನಂತಿದೆ. ಆದರೆ ಮರದ ತೊಗಟೆ (3)
3. ವೇಷ ಧರಿಸಿ ಕಾದು ಕಾದು... ದುಃಖ (3)
5. ಮುಂದಕ್ಕೆ ಹೇಗೆ ಹೋದ ನೋಡಿ, ಆತ ವೃದ್ಧ (3)
6. ಈ ಆದೇಶವನ್ನು ಹೊರಡಿಸಿದ್ದು ನಮ್ಮ ರಾಷ್ಟ್ರ ಅಲ್ಲ (4)
7. ಸಾರನ್ನದ ಜೊತೆಗೆ ಬಾಳೆ-ಬೆಲ್ಲ ಮಿಶ್ರಣ (4)
8. ಕೇಳಿಸಿತೇ ಆತನ ಕಷ್ಟಕಾಲದ ಕೂಗು (4)
9. ಸುಳ್ಳೇಕೆ? ಸಾಕು. ಅದು ಕದ್ದು ತಂದ ಹಣ (4)
11. ಮರ್ದನದ ಕೂಗು. ಮತ್ತೆ ಕೇಳಿಸಿದರೆ? (4)
13. ಸಂಬಂಧ ಬೆಸೆಸಲೆಂದು ಹೀಗೊಂದು ಸಿಹಿ ತಿನಿಸು (3)
14. ಕಬಳಿಸಲು ಕುಳಿತವ ಎಂಥ ಎಳೇ ಹುಡುಗ ನೋಡಿ (3)
15. ಹಳಬರ ಸಂಖ್ಯೆಯೇ ಅಲ್ಲಿ ತುಂಬ (3)

---

### ಪದಬಂಧ 26-7-2012 ರ ಉತ್ತರಗಳು

**ಎಡದಿಂದ ಬಲಕ್ಕೆ:**

1. ಸಾಮಾಜಿಕ; 3. ವಿಪಕ್ಷ; 4. ಲಾಲಸೆ; 6. ರಮಣೀಯ; 7. ಹೊರಗು; 9. ಅಂತರ; 11. ತುವರಿ (=ತೊಗರಿ); 13. ಜತನ; 15. ಸರ್ವಧನ; 17. ಭಲ್ಲೂಕ; 18. ಸದರ; 19. ಲತಾಗೃಹ.

**ಮೇಲಿಂದ ಕೆಳಕ್ಕೆ:**

1. ಸಾಕ್ಷರ; 2. ಕಲಾಯ; 3. ವಿಹಾರ; 5. ಸೆಳೆತ; 7. ಹೊಸತು; 8. ಗುಜರಿ; 9. ಅಂಬುಜ; 10. ರಸನ; 12. ವಲ್ಲಭ; 14. ತತ್ತರ; 15. ಸಕಲ; 16. 'ನಸಹ' (ಹಸನ ತಲೆಕೆಳಗು).

# ಪ್ರಶ್ನಾಂಕಣ

## ಹುಲಿಗಳಲ್ಲಿ ಎಷ್ಟು ವಿಧ?

ಹುಲಿ-ಅದೊಂದು ಬೆಕ್ಕು. ಪ್ರಸ್ತುತ ಧರೆಯಲ್ಲಿರುವ ಮೂವತ್ತೇಳು ಮಾರ್ಜಾಲ ಪ್ರಭೇದಗಳಲ್ಲೂ ಹುಲಿಯದೇ ದೈತ್ಯ ಗಾತ್ರದಲ್ಲಿ ಪ್ರಥಮ ಸ್ಥಾನ. ರುದ್ರ ಸೌಂದರ್ಯ, ಅಸೀಮ ಧೈರ್ಯ, ಅಪಾರ ಬಲ, ಅನುಪಮ ಬೇಟೆ ಸಾಮರ್ಥ್ಯ... ಇಂಥವೆಲ್ಲ ಗುಣಗಳ ಪ್ರತಿಮಾ ಸ್ವರೂಪಿಯಾಗಿ ವಿಶ್ವಪ್ರಸಿದ್ಧವಾಗಿರುವ ಹುಲಿ ನಮ್ಮ ಹೆಮ್ಮೆಯ ರಾಷ್ಟ್ರೀಯ ಪ್ರಾಣಿ ಕೂಡ.

ವಿಸ್ಮಯ ಏನೆಂದರೆ ಹುಲಿ ಪ್ರಭೇದ ಒಂದೇ ಒಂದಿದ್ದರೂ ಅದರ ಏಳು ಉಪ ಪ್ರಭೇದಗಳು ಪ್ರಸ್ತುತ ಅಸ್ತಿತ್ವದಲ್ಲಿವೆ. ಶರೀರದ ಉದ್ದ-ತೂಕ-ಗಾತ್ರಗಳಲ್ಲಿ, ಚರ್ಮದ ಪಟ್ಟೆ ಚಿತ್ತಾರಗಳಲ್ಲಿ, ನೈಸರ್ಗಿಕ ವಾಸದ ನೆಲೆಗಳಲ್ಲಿ ಅವು ಒಂದರಿಂದ ಮತ್ತೊಂದು ಭಿನ್ನವಾಗಿವೆ. ಸದ್ಯದ ಈ ಹುಲಿ ವಿಧಗಳ ಸಂಕ್ಷಿಪ್ತ ಪರಿಚಯ:

1. ಸೈಬೀರಿಯನ್ ಹುಲಿ: ಹುಲಿ ವಿಧಗಳಲ್ಲೆಲ್ಲ ಅತ್ಯಂತ ದೈತ್ಯ (ಚಿತ್ರ-1). 13 ಅಡಿ ಉದ್ದ, 318 ಕಿಲೋ ತೂಕ ತಲುಪುವ ಈ ಹುಲಿಯ ನೈಸರ್ಗಿಕ ನೆಲೆ ರಷ್ಯಾದ ಪೂರ್ವ ಭಾಗ ಚೀನಾ ಮತ್ತು ಕೊರಿಯ. 'ಮಂಚೂರಿಯನ್ ಹುಲಿ' ಎಂದೂ ಹೆಸರಾದ ಈ ಹುಲಿಗಳ ಸಂಖ್ಯೆ ಇನ್ನೂರು- ಮುನ್ನೂರು ಅಷ್ಟೆ.




2. ಸುಮಾತ್ರನ್ ಹುಲಿ: ಅತ್ಯಂತ ಚಿಕ್ಕ ಗಾತ್ರದ ಹುಲಿ ವಿಧ (ಚಿತ್ರ-2) 'ಸುಮಾತ್ರಾ' ದ್ವೀಪಕ್ಕಷ್ಟೇ ಸೀಮಿತವಾಗಿರುವುದರಿಂದ ಈ ಹೆಸರು. ಎಂಟು ಅಡಿ ಉದ್ದ ಗರಿಷ್ಠ. ಸದ್ಯದ ಸಂಖ್ಯೆ 500 ರಿಂದ 600.

3. ಭಾರತದ ಹುಲಿ: ನಮ್ಮ ದೇಶದ ಹುಲಿ ವಿಧ. 'ಬೆಂಗಾಲ್ ಟೈಗರ್' ಎಂದೂ ಇದಕ್ಕೇ ಹೆಸರು. ಹತ್ತು ಅಡಿ ಉದ್ದ ಬೆಳೆವ ಈ ಹುಲಿಯದು (ಚಿತ್ರ-4) ಬೃಹತ್ ಗಾತ್ರದಲ್ಲಿ ದ್ವಿತೀಯ ಸ್ಥಾನ. ಭಾರತ ನೇಪಾಳ ಮತ್ತು ಬಾಂಗ್ಲಾ ದೇಶಗಳಲ್ಲಿರುವ ಈ ಹುಲಿ ವಿಧದ್ದೇ ಪ್ರಸ್ತುತ ಗರಿಷ್ಠ ಸಂಖ್ಯೆ: 3000 ರಿಂದ 5000.

4. ಬಿಳಿ ಹುಲಿ: ಜೈವಿಕ ಮಾರ್ಪಾಡಿನಿಂದಾಗಿ ಬೆಳ್ಳನೆಯ ಚರ್ಮ ತಿಳಿ ಕಂದು ಬಣ್ಣದ ಪಟ್ಟೆಗಳು ಮತ್ತು ತಿಳಿ ಗುಲಾಬಿ ವರ್ಣದ ಕಣ್ಣುಗಳನ್ನು ಪಡೆದು ಜನಿಸುವ ಹುಲಿ. ಇಂಥ ಹುಲಿ ತುಂಬ ಅಪರೂಪ (ಚಿತ್ರ-3).

5. ಕಾಸ್ಪಿಯನ್ ಹುಲಿ: ಸರಿ ಸುಮಾರು ಬೆಂಗಾಲ್ ಹುಲಿನದೇ ಬಣ್ಣ-ಪಟ್ಟೆ ಚಿತ್ತಾರ. ಅಷ್ಟೇ ಗಾತ್ರ ಕೂಡ (ಚಿತ್ರ-5). ಆಫ್ಘಾನಿಸ್ಥಾನದ ಕೆಲ ಅಜ್ಞಾತ ನೆಲೆಗಳಲ್ಲಿ ವಾಸ; ಬೆರಳೆಣಿಕೆಯಷ್ಟೇ ಸಂಖ್ಯೆ.

6. ಕಾರ್ಬೆಟ್ ಹುಲಿ: ಬೆಂಗಾಲ್ ಹುಲಿಯ ನಂತರದ ಗರಿಷ್ಠ ಸಂಖ್ಯೆ ಈ ಹುಲಿಯದೇ. ಸದ್ಯದ ಅಂದಾಜು ಸಂಖ್ಯೆ 1500.

7. ಚೈನೀಸ್ ಹುಲಿ: ಚೀನಾದ ಅಡವಿಗಳಲ್ಲಿನ ಹುಲಿ ವಿಧ. ಈ ಹುಲಿಯ ಗರಿಷ್ಠ ಸಂಖ್ಯೆ 40!

ವಿಧ ಎಷ್ಟೇ ಇರಲಿ. ದುಷ್ಟ ಮನುಷ್ಯರಿಂದಾಗಿ ಅಲ್ಪ ಸಂಖ್ಯೆಗೆ ಕುಸಿದು, ಅಳಿವ ಹಾದಿಯಲ್ಲಿರುವುದೇ ಎಲ್ಲ ಹುಲಿ ವಿಧಗಳ ಪ್ರಧಾನ ಸಾಮ್ಯ. ಎಂಥ ದುರಂತ!

■ ಎನ್. ವಾಸುದೇವ್